ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ
DSERT
DEPARTMENT OF STATE EDUCATIONAL RESEARCH AND TRAINING
NO 4, 100 FT RING ROAD, BANASHANKARI 3RD STAGE BENGALURU - 085
E MAIL:dsertkar@gmail.com , Website: http://dsert.kar.nic.in
Phone : 080
26422372
26422373
26422374
Fax:26422377

ಶಿ.ತ2/DSERT/ ಡಯಟ್. ಶೈ.ಸ್ಪಂದನ/02/2015-16 ದಿನಾಂಕ .15.06.2015

## ವಿಜಯಪುರ ಜಿಲ್ಲೆಯ ಶೈಕ್ಷಣಿಕ ಸ್ಪಂದನ ಕಾರ್ಯಕ್ರಮದ ಸಭಾ ನಡಾವಳಿ

ವಿಷಯ:- ದಿನಾಂಕ15.06.2015 ರಂದು ಡಯಟ್ ವಿಜಯಪುರ ಇಲ್ಲಿ ಡಿ.ಎಸ್.ಇ.ಆರ್.ಟಿ. ಬೆಂಗಳೂರು ಹಮ್ಮಿಕೊಂಡಿದ್ದ ಜಿಲ್ಲಾ ಶೈಕ್ಷಣಿಕ ಸ್ಪಂದನ ಕಾರ್ಯಕ್ರಮದ ಸಭಾ ನಡಾವಳಿ.

ದಿನಾಂಕ 15.06.2015 ರಂದು ವಿಜಯಪುರ ಡಯಟ್ ನಲ್ಲಿ ನಡೆದ ಶೈಕ್ಷಣಿಕ ಸ್ಪಂದನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶ್ರೀ. ಎಸ್. ಜಯಕುಮಾರ್, ನಿರ್ದೇಶಕರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡಾವಳಿಗಳು.

### ಹಾಜರಿದ್ದವರು

| ಕ್ರ.ಸಂ | ಅಧಿಕಾರಿಗಳ ಹೆಸರು ಮತ್ತು ವಿಳಾಸ |
|---|---|
| 1 | ಎಸ್.ಜಯಕುಮಾರ ,ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 2 | ಎಂ.ಎಂ.ಸಿಂಧೂರ, ಉಪನಿರ್ದೇಶಕರು (ಅಭಿವೃದ್ಧಿ)ಡಯಟ ವಿಜಯಪುರ |
| 3 | ಎಸ್.ಎಸ್.ಬಿರಾದಾರ, ಉಪನಿರ್ದೇಶಕರು (ಆಡಳಿತ) ಸಾ.ಶಿ.ಇ. ವಿಜಯಪುರ |
| 4 | ವ್ಹಿ. ವಾಯ್.ದೇವಣಗಾಂವಿ, ಡಿ.ವಾಯ್.ಪಿ.ಸಿ. ಎಸ್.ಎಸ್.ಎ. ವಿಜಯಪುರ |
| 5 | ಗಂಗಮಾರೇಗೌಡ, ಹಿ.ಸ.ನಿ. ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 6 | ಗೀತಾ ಕೆ.ಜಿ.,ಹಿ.ಸ.ನಿ. ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 7 | ದ್ರಾಕ್ಷಾಯಣಿ, ಹಿ.ಸ.ನಿ. ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 8 | ರಂಗಧಾಮಪ್ಪಸಿ, ಹಿ.ಸ.ನಿ. ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 9 | ಕುಮಾರಿ ಎಂ.ವ್ಹಿ., ಹಿ.ಸ.ನಿ .ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 10 | ಅಂಜಿಲಿನಾ ಕ್ರಿಸ್ಟನ್, ಹಿ.ಸ.ನಿ. ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 11 | ಮಂಜುನಾಥ, ಹಿ.ಸ.ನಿ. ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 12 | ಭಾನುಮತಿ, ಹಿ.ಸ.ನಿ. ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 13 | ಉಷಾ. ಎಂ.ಡಿ, ಹಿ.ಸ.ನಿ. ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 14 | ಜಂಗಿ. ಎಸ್.ಎಮ್, ಕಲಾವಿಧರು .ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 15 | ಸಾಯಿರಾಬಾನು ಖಾನಂ, ಬಿ.ಇ.ಓ. ವಿಜಯಪುರ ನಗರ |
| 16 | ಮಹಾದೇವ ಬೆಳ್ಳಣ್ಣವರ, ಬಿ.ಇ.ಓ. ವಿಜಯಪುರ ಗ್ರಾಮೀಣ |
| 17 | ಜೆ.ಟಿ.ತಳಕೇರಿ,ಬಿ.ಇ.ಓ.. ಇಂಡಿ |
| 18 | ಎಂ.ಎ.ಗುಳೇದಗುಡ್ಡ, ಬಿ.ಇ.ಓ. ಬ.ಬಾಗೇವಾಡಿ |
| 19 | ಶಿವಣ್ಣ, ಬಿ.ಇ.ಓ. ಚಡಚಣ |
| 20 | ಪ್ರಮೀಳಾ, ಹಿರಿಯ ಉಪನ್ಯಾಸಕರು ಡಯಟ ವಿಜಯಪುರ |
| 21 | ಎಂ.ವಾಯ್.ಹೊನ್ನಕಸ್ತೂರಿ, ಹಿ.ರಿಯ ಉಪನ್ಯಾಸಕರು ಡಯಟ ವಿಜಯಪುರ |
| 22 | ಎಸ್.ಎಸ್.ಮುಜಾವರ ,ಉಪನ್ಯಾಸಕರು ಡಯಟ ವಿಜಯಪುರ |
| 23 | ಎಂ.ವ್ಹಿ.ಹುಡೇದ, ಉಪನ್ಯಾಸಕರು ಡಯಟ ವಿಜಯಪುರ |

| | |
|---|---|
| 24 | ಎಸ್.ಐ.ಅಜೂರ, ಉಪನ್ಯಾಸಕರು ಡಯಟ ವಿಜಯಪುರ |
| 25 | ಎಸ್.ಎಲ್.ಇಂಗಳೇಶ್ವರ, ಉಪನ್ಯಾಸಕರು ಡಯಟ ವಿಜಯಪುರ |
| 26 | ಎ.ಎಲ್. ನಗರ, ಉಪನ್ಯಾಸಕರು ಡಯಟ ವಿಜಯಪುರ |
| 27 | ಆರ್.ಎಲ್.ಯಲಡಗಿ, ಉಪನ್ಯಾಸಕರು ಡಯಟ ವಿಜಯಪುರ |
| 28 | ಸುಜಾತಾ. ಪೂಜಾರಿ, ಉಪನ್ಯಾಸಕರು ಡಯಟ ವಿಜಯಪುರ |
| 29 | ಮಲ್ಲಪ್ಪ. ಎಸ್.ಹೆಚ್.,ಬಿ.ಆರ್.ಸಿ. ಬ.ಬಾಗೇವಾಡಿ |
| 30 | ಜಿ.ಜಿ.ಕುಲಕರ್ಣಿ, ಬಿ.ಆರ್.ಸಿ. ವಿಜಯಪುರ ನಗರ |
| 31 | ಎ.ಹೆಚ್. ಬಿರಾದಾರ, ಬಿ.ಆರ್.ಸಿ. ಮುದ್ದೇಬಿಹಾಳ |
| 32 | ವ್ಹಿ.ಎಲ್.ರಾಠೋಡ, ಬಿ.ಆರ್.ಸಿ. ಚಡಚಣ |
| 33 | ಎಸ್.ಬಿ.ಬಿರಾದಾರ, ಬಿ.ಆರ್.ಸಿ. ವಿಜಯಪುರ ಗ್ರಾಮೀಣ |
| 34 | ಎಸ್.ಎಸ್.ಜೇರಟಗಿ,ಬಿ.ಆರ್.ಸಿ. ಸಿಂದಗಿ |
| 35 | ಹೆಚ್.ಎ. ಇಂಡೀಕರ, ಬಿ.ಆರ್.ಸಿ. ಇಂಡಿ |
| 36 | ವ್ಹಿ.ಎಸ್.ಹಂದಿಗೋಳ, ವಿಜಯಪುರ |
| 37 | ವ್ಹಿ.ಎಸ್.ಹರನಾಳ, ಎ.ಎಸ್.ಓ. ಡಯಟ ವಿಜಯಪುರ |
| 38 | ಕೆ.ಹೆಚ್. ಭಂಡಾರಕರ, ಅಧೀಕ್ಷಕರು ಡಯಟ ವಿಜಯಪುರ |
| 39 | ಸುನೀತಾ ಸುರೇಶರಾವ, ಅಜೀಂ ಪ್ರೇಮಜಿ ಫೌಂಡೇಶನ |

ದಿನಾಂಕ: 15–06–2015 ರಂದು ವಿಜಯಪುರ ಜಿಲ್ಲೆಯ ಎಲ್ಲ ಶೈಕ್ಷಣಿಕ ವಲಯಗಳ ಶಾಲೆಗಳ ಸಂದರ್ಶನವನ್ನು ಮಾನ್ಯ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು ಹಾಗೂ ಹಿರಿಯ ಸಹಾಯಕ ನಿರ್ದೇಶಕರ ತಂಡದೊಂದಿಗೆ ಶೈಕ್ಷಣಿಕ ಸ್ಪಂದನ ಕಾರ್ಯಕ್ರಮದಡಿಯಲ್ಲಿ ಕೈಕೊಳ್ಳಲಾಗಿದೆ. ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ವಿವರ ಈ ಕೆಳಗಿನಂತಿದೆ.

ಶಾಲಾ ಭೇಟಿಯ ನಂತರ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಿಜಯಪುರದಲ್ಲಿ ನಡೆದ ಸಭೆಯ ನಡಾವಳಿಗಳನ್ನು ಈ ಕೆಳಗೆ ವಿವರಿಸಲಾಗಿದೆ.

- **ಶ್ರೀರಂಗಧಾಮಪ್ಪ ಹಿ.ಸ. ನಿ ;– ಭೇಟಿ ನೀಡಿದ ಸಂಸ್ಥೆ ಹಾರ್ಡೀಕರ್ ಮಂಜಪ್ಪ ಡಿ.ಇಡಿ ಕಾಲೇಜು, ಆಲಮಟ್ಟಿ:**
- ವಿಜ್ಞಾನ, ಸಮಾಜ ವಿಜ್ಞಾನ ಮತ್ತು ದೈಹಿಕ ಶಿಕ್ಷಣಕ್ಕೆ ಬೋಧಕರನ್ನು ನೇಮಿಸಿಕೊಂಡಿಲ್ಲ.
- ಇರುವ ಬೋಧಕರು ಎಲ್ಲರು ಅಗತ್ಯ ವಿದ್ಯಾರ್ಹತೆ ಹೊಂದಿಲ್ಲ. 2 ಸಿಬ್ಬಂದಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದರು.
- ಸಂಪನ್ಮೂಲ ಸಾಹಿತ್ಯ ಮತ್ತು ಕ್ಲಾಸ್ ಟಾಕ್ ಪೂರ್ಣಪ್ರಮಾಣದಲ್ಲಿ ಪಡೆದಿಲ್ಲ.
- ಶೈಕ್ಷಣಿಕ ಚಟುವಟಿಕೆಗಳು ಕ್ರಮಬದ್ಧವಾಗಿ ನಡೆದ ದಾಖಲೆ ಒದಗಿಸಲಿಲ್ಲ.
- ಸಮನ್ವಯ ಸಮಿತಿ ಭೇಟಿ ಮಾಡಿಲ್ಲ. ತಪಾಸಣೆ ಆಗಿರುವುದಿಲ್ಲ.

**ಸರ್ಕಾರಿ ಹಿರಿಯ ಪ್ರಾಥಮಿಕ .ಶಾಲೆ ಕಮದಾಳ**

- ಈ ಶಾಲೆಯಲ್ಲಿ ನಲಿ–ಕಲಿ 03 ಘಟಕಗಳು ಇವೆ.
- ಹಾಲಿ ತರಗತಿ ನಿರ್ವಹಿಸುತ್ತಿರುವ ಒಬ್ಬ ಶಿಕ್ಷಕರಿಗೆ ನಲಿ–ಕಲಿ ತರಬೇತಿ ಆಗಿರುವುದಿಲ್ಲ.
- ಪ್ರಸಕ್ತ ಸಾಲಿನ ಟಿ.ಎಲ್.ಎಂ. ತಯಾರಿಕೆ ಆಟಗಳ ಸ್ಕ್ರಿಪ್ಟ್ ತಯಾರಿಸಬೇಕಾಗಿದೆ.
- ಶಾಲೆಯಲ್ಲಿ ವಿದ್ಯುತ್ ವೈರಿಂಗ್ ಜೋತಾಡುತ್ತಿದ್ದು ಅಪಾಯಕರವಾಗಿದೆ.

**ಸ.ಪ್ರೌಢ.ಶಾಲೆ ಕಮದಾಳ ಈ ಶಾಲೆ**ಯಲ್ಲಿ 3 ತರಗತಿಯಲ್ಲಿ ಒಟ್ಟು 69 ವಿದ್ಯಾರ್ಥಿಗಳು ಇದ್ದಾರೆ.

- ಎಲ್ಲ ವಿಷಯ ಶಿಕ್ಷಕರು ಇದ್ದಾರೆ. ಐ.ಸಿ.ಟಿ–3 ಸಂಬಂಧಿಸಿದಂತೆ ವಿತರಿಸಿದ ಉಪಕರಣಗಳು ಸುಸ್ಥಿತಿಯಲ್ಲಿವೆ.
- ಐ.ಸಿ.ಟಿ–3 ವಿದ್ಯುತ್ ಬಿಲ್‌ನ ಅಂದಾಜು ಮೊತ್ತ ರೂ. 7,000/– ಬಾಕಿ ಇರುತ್ತದೆ.
- ವಿಜ್ಞಾನ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿರುವದಿಲ್ಲ.
- ಸೇತುಬಂಧ ಕಾರ್ಯ ಜಾರಿಯಲ್ಲಿದೆ. ಡಯಟನಿಂದ ಪೂರೈಕೆಯಾದ ಸಾಮರ್ಥ್ಯಗಳ ಪಟ್ಟಿ ಹಾಗೂ ಪ್ರಶ್ನೆಪತ್ರಿಕೆಗಳನ್ನು ಬಳಕೆಮಾಡಿಕೊಳ್ಳುತ್ತಿದ್ದಾರೆ.

- ಸಿ.ಸಿ.ಇ. ಯಾವುದೇ ಗೊಂದಲ ಇಲ್ಲವೆಂದು ಶಿಕ್ಷಕರು ಹೇಳಿದರು.
- ವಿಜ್ಞಾನ ಪ್ರಯೋಗಾಲಯ ಮತ್ತು ಗ್ರಂಥಾಲಯ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿಲ್ಲ.
- ಭೌತಿಕ ಮತ್ತು ಮಾನವ ಸಂಪನ್ಮೂಲಗಳು ಅಗತ್ಯ ಪ್ರಮಾಣದಲ್ಲಿ ಲಭ್ಯವಿದ್ದರೂ ಶಾಲಾ ಶೈಕ್ಷಣಿಕ ಪ್ರಗತಿ ಕುಂಠಿತವಾಗಿದೆ.
- ಅಸ್ಲಾಂ ಎಂಬ ದೃಷ್ಟಿ ದೋಷವಿರುವ ವಿದ್ಯಾರ್ಥಿಗೆ ಅಗತ್ಯ ಸೌಲಭ್ಯ ಒದಗಿಸಬೇಕಿದೆ.
- ಶಾಲಾ ಸ್ವಚ್ಚತೆಯ ಕಾಪಾಡಬೇಕಿದೆ. ಸಾಕಷ್ಟು ಕೊಠಡಿಗಳಿವೆ ಸಮರ್ಪಕವಾಗಿ ಬಳಕೆ ಆಗುತ್ತಿಲ್ಲ.
- ಮಧ್ಯಾಹ್ನದ ಬಿಸಿ ಊಟವನ್ನು ಕಟ್ಟಿಗೆ ಒಲೆ ಉರಿಸಿ ತಯಾರಿಸಲಾಗುತ್ತಿದೆ.
- ಮಕ್ಕಳ ಮೌಲ್ಯಮಾಪನದ ವಯಕ್ತಿಕ ಕಡತ ನಿರ್ವಹಣೆ ಅರ್ಥಪೂರ್ಣವಾಗಿಲ್ಲ.

**ಡಯಟ್ ವಿಜಯಪುರದಲ್ಲಿ ಡಿ.ಇಡಿ ಪರಿಶೀಲನಾಂಶಗಳು**

- ಜಿಲ್ಲೆಯಲ್ಲಿ 2014-15 ಸಾಲಿನಲ್ಲಿ 25 ಡಿ.ಇಡಿ. ಸಂಸ್ಥೆಗಳಲ್ಲಿ ಪ್ರಶಿಕ್ಷಣಾರ್ಥಿಗಳು ಮಾತ್ರ ದಾಖಲಾತಿಯಾಗಿರುತ್ತವೆ.
- ಸರ್ಕಾರಿ 1, ಅನುದಾನಿತ 2 ಮತ್ತು ಅನುದಾನ ರಹಿತ 22 ಒಟ್ಟು 25 ಡಿ.ಇ.ಡಿ ಸಂಸ್ಥೆಗಳಿರುತ್ತವೆ.
- ಪ್ರಥಮ ವರ್ಷ 220, ದ್ವಿತೀಯ ವರ್ಷ 181 ಒಟ್ಟು 401 ದಾಖಲಾತಿ ಇರುತ್ತದೆ.
- ಸುತ್ತೋಲೆ ಅನ್ವಯ ದಾಖಲಾತಿ ಅನುಮೋದನೆಯಾಗಿವೆ.
- ಸಂಸ್ಥೆಯ ಪರಿಶೀಲನೆಗಾಗಿ ತ್ರಿಸದಸ್ಯ ಸಮಿತಿಯ 2 ತಂಡಗಳು ಭೇಟಿ ನೀಡಿರುತ್ತವೆ.
- 25 ಡಿ.ಇಡಿ ಸಂಸ್ಥೆಗಳು ಜಿಲ್ಲೆಯಲ್ಲಿದ್ದರೂ ಯಾವ ಸಂಸ್ಥೆಯ ವಾರ್ಷಿಕ ತಪಾಸಣೆ ಆಗಿರುವದಿಲ್ಲ. ಈ ಕುರಿತು ಕ್ರಮವಹಿಸಲು ನಿರ್ದೇಶಕರು ಸೂಚಿಸಿದರು.
- ಈಗಾಗಲೇ ಸಮನ್ವಯ ಸಮಿತಿ ಒಂದು ಸಲ ಭೇಟಿ ನೀಡಿದ್ದು ಲಿಖಿತ ಸೂಚನೆ ನೀಡಲು ತಿಳಿಸಿದರು.
- ಡಿ.ಎಸ್.ಇ.ಆರ್.ಟಿಯಿಂದ ಬಂದ ಸಂಪನ್ಮೂಲ ಸಾಹಿತ್ಯವನ್ನು ಎಲ್ಲ ಡಿ.ಇಡಿ ಸಂಸ್ಥೆಗಳಿಗೆ ಕಡ್ಡಾಯವಾಗಿ ಸಾಫ್ಟ್ ಕಾಫಿ/ ಈ ಮೇಲ್ ಮಾಡಲು ತಿಳಿಸಿದರು.
- ಶ್ರೀಮತಿ ಪ್ರಮೀಳಾ ಹಿ.ಉ 10 ಡಿ.ಇ.ಡಿ ಸಂಸ್ಥೆಗಳನ್ನು ಸಂದರ್ಶಿಸಿದ್ದು ಲಿಖಿತ ದಾಖಲೆಗಳು ಇರುವದಿಲ್ಲ.
- 2015-16 ನೇ ಸಾಲಿನಲ್ಲಿ ಹೆಚ್ಚಿನ ಪ್ರಶಿಕ್ಷಣಾರ್ಥಿಗಳ ದಾಖಲಾತಿಗಾಗಿ ಅಗತ್ಯ ಪ್ರಚಾರ ಮಾಡಲು ತಿಳಿಸಿದರು.
- ಪಿ.ಎಸ್.ಟಿ.ಇ. ವಿಭಾಗವು ಟಿ.ಇ. ಪ್ಲಾನ್ ಅನುಸಾರ ರಚನ ಮಾಡಿಕೊಂಡು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ತಿಳಿಸಲಾಯಿತು.
- ಹಾರ್ಡಿಕರ್ ಮಂಜಪ್ಪ ಡಿ.ಇಡಿ. ಕಾಲೇಜ ಆಲಮಟ್ಟಿ ಇಲ್ಲಿ 3 ಪ್ರಶಿಕ್ಷಣಾರ್ಥಿಗಳು ಮಾತ್ರ ದಾಖಲಾಗಿದ್ದು ಎಲ್ಲರೂ ಗೈರುಹಾಜರಾಗಿದ್ದರು.

**ನಿರ್ದೇಶಕರು**

- ಸಂದರ್ಶಿಸಿದ ಶಾಲೆಗಳಲ್ಲಿನ ಶೌಚಾಲಯ ಮತ್ತು ಅಡುಗೆ ಕೊಣೆ ಇತ್ಯಾದಿ ವ್ಯವಸ್ಥೆ ಕುರಿತು ಪ್ರಶ್ನಿಸಿದಾಗ ಸ.ಪ್ರೌ.ಶಾಲೆ ಕಮದಾಳದಲ್ಲಿ ಗ್ಯಾಸ್ ಪೂರೈಕೆ ಇಲ್ಲದ್ದನ್ನು ಸರಿಪಡಿಸುವಂತೆ ಬಿ.ಇ.ಓ ರವರಿಗೆ ಸೂಚಿಸಿದರು.
- ಡಿ.ಇಡಿ ಸಂಸ್ಥೆಗಳನ್ನು ತಪಾಸಣೆ ಮಾಡುವುದು ಮತ್ತು ನಿಯಮಿತ ಭೇಟಿಗಳನ್ನು ನೀಡಿ ಲಿಖಿತ ತಿಳುವಳಿಕೆಗಳನ್ನು ನೀಡುವುದು.
- ಪೆನ್ ಡ್ರೈವ್‌ಗೆ ಬದಲಾಗಿ ಇ- ಮೇಲ್ ಮೂಲಕ ಸಂಪನ್ಮೂಲ ಸಾಹಿತ್ಯ ನೀಡಲು ತಿಳಿಸಿದರು.
- ಸ.ಪ್ರೌ.ಶಾಲೆ ಕಮದಾಳದಲ್ಲಿ ರೂ. 7,000/- ವಿದ್ಯುತ್ ಬಿಲ್ಲನ್ನು ಸಂಚಿತ ನಿಧಿಯಿಂದ ಪಾವತಿಸಲು ಅನುಮತಿಸಿದೆ..
- ಎನ್.ಟಿ.ಎಸ್.ಇ./ ಎನ್.ಎಂ.ಎಂ.ಎಸ್. ಪರೀಕ್ಷೆಗೆ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸಬೇಕು.
- ಹಳೆಯ ಸಾಮಾನು ವಿಲೆವಾರಿ ಮಾಡಲುಬಿ.ಇ.ಓ ರವರ ನೇತೃತ್ವ ವಹಿಸಿಕೊಂಡು ಆಂದೋಲನದೋಪಾದಿಯಲ್ಲಿ ವಿಲೆವಾರಿ ಮಾಡಲು ತಿಳಿಸಿದರು.
- ಶಾಲಾ ಮೌಲ್ಯಮಾಪನ ಪರಿಣಾಮಕಾರಿಯಾಗಿ ಮಾಡಲು ಬಿ.ಇ.ಓ ರವರಿಗೆ ತಿಳಿಸಿದರು.

1. **ಶ್ರೀ ಮಂಜುನಾಥ ಹಿ.ಸ.ನಿ., ಭೇಟಿ ನೀಡಿದ ಶಾಲೆ ಸ.ಪ್ರೌ.ಶಾಲೆ ಯಲಗೂರ, ಹುನಗುಂದ ತಾ.**

- ಮುಖ್ಯ ಗುರುಗಳು 10.20ರ ನಂತರ ವಿಳಂಬವಾಗಿ(10.20ರ ನಂತರ)ಶಾಲೆಗೆ ಬಂದರು.
- ಶಾಲೆಯ ಆವರಣ ದೊಡ್ಡದಿದ್ದು ಅಸ್ತವ್ಯಸ್ಥವಾಗಿದೆ.
- 8 ನೇ ತರಗತಿ ಪ್ರಾರಂಭಿಸಿದ್ದು ಪ್ರವೇಶ ದಾಖಲೆಯಲ್ಲಿ ದಾಖಲು ಮಾಡಿಲ್ಲ.
- ಡಯಟನಿಂದ ಪೂರೈಸಲಾಗಿರುವ ಸೇತುಬಂಧ ಪ್ರಶ್ನೆಪತ್ರಿಕೆ ಮತ್ತು ಸಾಮರ್ಥ್ಯಗಳ ಪಟ್ಟಿ ಮಾದರಿ ಉತ್ತಮವಾಗಿದೆ.
- ಐ.ಸಿ.ಟಿ-3 ಬಳಕೆಯಲ್ಲಿದೆ/ ಸುಸ್ಥಿತಿಯಲ್ಲಿದೆ.
- ಎನ್.ಟಿ.ಎಸ್.ಇ./ಎನ್.ಎಂ.ಎಂ.ಎಸ್. ಪರೀಕ್ಷೆಗೆ ಯಾವ ವಿದ್ಯಾರ್ಥಿಗಳನ್ನು ನೊಂದಾಯಿಸಿಲ್ಲ.
- ಎಸ್.ಎಸ್.ಎಲ್.ಸಿ. ಫಲಿತಾಂಶವು ಕಡಿಮೆ ಅಂದರೆ 48% ಮಾತ್ರವಾಗಿದೆ.
- ಶೌಚಾಲಯ ಬಳಕೆ ಮಾಡುವ ಸ್ಥಿತಿಯಲ್ಲಿಲ್ಲ.
- ಭೌತಿಕ ವಸ್ತುಗಳ (ಹಳೆ) ವಿಲೇವಾರಿ ಸೈಕಲ್ ಸ್ಟಾಪ್, ಪೀಠೋಪಕರಣ ವ್ಯವಸ್ಥೆ ಸರಿಪಡಿಸಬೇಕಿದೆ.

**ಸ.ಪ್ರೌ.ಶಾಲೆ ಬೇನಾಳ ಶಾಲೆ**

- ಸಂದರ್ಶಿಸಿದಾಗ ಟೆಲಿ ಏಜ್ಯೂಕೇಶನ ಪ್ರಾರಂಭವಾಗಿರಲಿಲ್ಲ, ಕೊ–ಅರ್ಡಿನೇಟರ್ ಬರುತ್ತಿಲ್ಲವೆಂದು ಶಿಕ್ಷಕರು ತಿಳಿಸಿದರು.
- ಶಾಲೆಯಲ್ಲಿ ಸ್ಥಳದ ಅಭಾವವಿದೆ 8ನೇ ವರ್ಗದ ಪಠ್ಯಪುಸ್ತಕದ ಕೊರತೆ ಇದೆ.

**ನಿರ್ದೇಶಕರು,**

- ಶ್ರೀ ಸುರಕೊಡ ಮುಖ್ಯ ಗುರುಗಳು ರವರನ್ನು ಈ ದಿನ ಎಲ್.ಡಬ್ಲ್ಯೂ.ಪಿ. ಮಾಡುವುದು.
- ಶಾಲೆ ಪ್ರಾರಂಭದಿಂದ ಪ್ರೌಢ ಶಾಲೆಗೆ ಪುಸ್ತಕಗಳನ್ನು ಒದಗಿಸುವ ಕುರಿತು ಬಿ.ಇ.ಓ ರವರು ಯಾವುದೇ ಕ್ರಮ ತೆಗೆದುಕೊಂಡಿರುವದಿಲ್ಲ.
- ಕಡಿಮೆ ಫಲಿತಾಂಶ ಇತ್ಯಾದಿಗಳ ಕುರಿತು ಕಾರಣ ಕೇಳಿ ನೋಟೀಸ್ ಬಿ.ಇ.ಓ ರವರಿಗೆ ಸೂಚಿಸಿದರು.
- ಟೆಲಿ ಏಜ್ಯುಕೇಶನ ಕೊ ಆರ್ಡಿನೇಟರ್ ನಿಯಮಿತವಾಗಿರುವ ಹಾಗೆ ಕ್ರಮ ಕೈಕೊಳ್ಳಲು ತಿಳಿಸಿದರು.

2. **ಶ್ರೀಮತಿ ಅಂಜಿಲಿನಾ ಕ್ರಿಸ್ಟನ್ ಹಿ.ಸ.ನಿ., ಕೆ.ಬಿ.ಎಸ್.28 ವಿಜಯಪುರ ನಗರ ಶಾಲೆ :-**

- ಪ್ರಾರ್ಥನೆಯ ನಂತರ ಹಾಲು ವಿತರಣೆಯಲ್ಲಿ ವಿಳಂಬವಾಗುತ್ತಿತ್ತು. ಇದನ್ನು ತಪ್ಪಿಸಲು ವಿತರಣೆಗೆ 2, 3 ಬಕೆಟ್ ಬಳಸಲು ತಿಳಿಸಿರುವದಾಗಿ ಹೇಳಿದರು.
- ಸ್ವಚ್ಛತೆಯ ಕೊರತೆ ಕಂಡು ಬಂದಿದೆ.
- .ಕ್ಯಾಲ್‌ಶಾಲೆ ಇದಾಗಿದ್ದು ಗಣಕಯಂತ್ರ ಬಳಕೆ ಉತ್ತಮವಾಗಿದೆ.
- ಎನ್.ಪಿ.ಜಿ.ಇ.ಎಲ್. ಹೊಲಿಗೆ ಯಂತ್ರ ಈಗಲೂ ಬಳಕೆಯಲ್ಲಿದೆ.
- ಮಕ್ಕಳ ಭಾಗವಹಿಸುವಿಕೆ ಉತ್ತಮವಾಗಿದೆ.
- ನಲಿ–ಕಲಿ 1 ಘಟಕ ಮಾತ್ರ ಇದೆ. ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಇದು ಕಲಿಕೆಗೆ ತೊಡಕಾಗಿದೆ.
- ಪ್ರತ್ಯೇಕ ಶೌಚಾಲಯವಿಲ್ಲ. ಗಂಡು ಮಕ್ಕಳು ಬಯಲನ್ನು ಆಶ್ರಯಿಸಿರುವುದು ಕಂಡು ಬಂದಿದೆ.
- ರೇಡಿಯೋಪಾಠ ನಿರ್ವಹಿಸಿರುವ ಬಗ್ಗೆ ದಾಖಲಿಸಿದೆ.

**ಸರ್ಕಾರಿ ಮರಾಠಿ ಪ್ರಾಥಮಿಕಶಾಲೆ ನಂ2 ವಿಜಯಪುರ ನಗರ ಶಾಲೆ**

- 135 ವರ್ಷಗಳ ಹಿಂದಿನ ಶಾಲೆಯಾಗಿದ್ದು ಬ್ರಿಟಿಷ್ ಕಾಲದಿಂದಲೇ ಇರವುದನ್ನು ಮತ್ತು ಪ್ರಧಾನಿ ಜವಹಾರಲಾಲ್ ನೆಹರೂ ರವರು ಈ ಶಾಲೆಗೆ ಭೇಟಿ ನೀಡಿದ್ದಾರೆ. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಿಡಲು ಸೂಚಿಸಲಾಗಿದೆ.
- ಅಕ್ಷರ ದಾಸೋಹ ಸಿಬ್ಬಂದಿ ಇರುವದಿಲ್ಲ.

**ಡಯಟ ವಿಜಯಪುರದ ಪರಿಶೀಲನಾಂಶಗಳು**

- ಭೂಗೋಳ ಪ್ರಯೋಗಾಲಯ ವಿಶೇಷವಾಗಿದೆ. ಇನ್‌ಸ್ಪೈಯರ್ ಅವಾರ್ಡ ಕಾರ್ಯಕ್ರಮಕ್ಕೆ 05 ವಿದ್ಯಾರ್ಥಿಗಳು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ..

**ನಿರ್ದೇಶಕರು**

- ಬಿ.ಇ.ಓ ನಗರ ವಲಯ ವಿಜಯಪುರ ರವರಿಗೆ ಶಾಲಾ ವೇಳೆ ಕೇಳಿ ಹಾಲು ಪೂರೈಕೆಗೆ ಸೂಕ್ತ ಕ್ರಮ ಕೈಕೊಳ್ಳಲು ಸೂಚಿಸಿದರು.
- ಇಡೀ ಜಿಲ್ಲೆಯಲ್ಲಿ ಒಂದೇ ಶಾಲಾ ವೇಳೆ ನಿಗಧಿ ಮಾಡುವಂತೆ ಡಿ.ಡಿ.ಪಿ.ಐ (ಆಡಳಿತ) ವಿಜಯಪುರ ರವರಿಗೆ ತಿಳಿಸಿದರು. ಎಲ್ಲ ಶಾಲೆಗಳಲ್ಲಿ ಪ್ರತ್ಯೇಕ ಶೌಚಾಲಯಗಳನ್ನು ಉತ್ತಮ ಸ್ಥಿತಿಯಲ್ಲಿ ನಿರ್ವಹಿಸಲು ಕ್ರಮ ಕೈಗೊಳ್ಳಲು ಡಿ.ಡಿ.ಪಿ.ಐ. ರವರಿಗೆ ಸೂಚಿಸಿದರು.

3. **ಶ್ರೀಮತಿ ಭಾನುಮತಿ ಹಿ.ಸ.ನಿ. ಕೆ.ಬಿ.ಎಸ್. ನಂ: 28 ವಿಜಯಪುರ ನಗರ ಶಾಲೆ**

- ಮಕ್ಕಳು ರಾಷ್ಟ್ರಗೀತೆಯನ್ನು ಅಸ್ಪಷ್ಟವಾಗಿ ಹಾಡುತ್ತಾರೆ. ಶಾಲೆಯಲ್ಲಿ ಸ್ವಚ್ಛತೆ ಕೊರತೆ ಇದೆ.
- 10 ಅಂಶಗಳ ಕಾರ್ಯಕ್ರಮ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿರುವುದಿಲ್ಲ.

**ಕೆ.ಜಿ.ಎಸ್. ನಂ: 11 ವಿಜಯಪುರ ನಗರ ಶಾಲೆ**

- ಪ್ರಾರ್ಥನೆಯಲ್ಲಿಮಕ್ಕಳು ತಾವು ಮಾಡಿವ ಚಟುವಟಿಕೆಗಳಾವವು ಎಂದು ಕೇಳಿದಾಗ ವಿದ್ಯಾರ್ಥಿನಿಯೊಬ್ಬಳು ತಾನು ಓದಿದ ಪುಸ್ತಕದ ಸಾರಾಂಶ ಹೇಳಿದಳು.
- ಸೇತುಬಂಧ ನಿರ್ವಹಿಸಲಾಗುತ್ತಿದೆ. ದಿನಚರಿಬರೆಯುತ್ತಿದ್ದಾರೆ.
- ಸರಣಿ ಪರೀಕ್ಷೆ ಮಾಡುತ್ತಿದ್ದಾರೆ.ಇಲ್ಲಿ ಶಿಕ್ಷಕರಿಗೆ ಪರೀಕ್ಷೆ ಎಂಬ ಪದ ತೆಗೆದುಹಾಕಲು ತಿಳಿಸಲಾಗಿದೆ.
- ಪೋಷಕರು ಈ ಪರೀಕ್ಷೆ ಕುರಿತು ಪ್ರಶಂಸಿದ್ದಾರೆ.
- ಸಹೋದ್ಯೋಗಿಗಳ ಪಾಠ ಅವಲೋಕನ ಮಾಡುತ್ತಿದ್ದಾರೆ..

**ಡಯಟ ವಿಜಯಪುರ ಪರಿಶೀಲನಾಂಶಗಳು**

- ಅಧಿಕಾರಿಗಳ ಶಾಲಾ ಸಂದರ್ಶನಗಳು 25% ಆಗಿದೆ.ಪ್ರಸಕ್ತ ಸಾಲಿನಲ್ಲಿ ಸಂದರ್ಶನಗಳು ಹೆಚ್ಚಾಗಬೇಕು.

**ನಿರ್ದೇಶಕರು**

- ಸಂದರ್ಶನಗಳ ಮಾಹಿತಿಯ ಆನ್‌ಲೈನ್ ಎಂಟ್ರಿ ಆಗುತ್ತಿರುವ ಬಗ್ಗೆ ಪ್ರಶ್ನಿಸಿದಾಗ ನಡೆಯುತ್ತಿರುವದಾಗಿ ಪ್ರಾಚಾರ್ಯರು ತಿಳಿಸಿದರು.
- ಶಾಲಾ ಭೇಟಿಯಲ್ಲಿ ಅಲ್ಪಸಂಖ್ಯಾತ ಶಾಲೆ ಸೇರಿ ಎ ದಲ್ಲಿ 3, ಬಿ ದಲ್ಲಿ 3, ಸಿ ದಲ್ಲಿ 3 ಶಾಲೆಗಳಿರಬೇಕು ಎಂದು ತಿಳಿಸಿದರು.
- ಸಂದರ್ಶನ ವರದಿಯಲ್ಲಿ ಋಣಾತ್ಮಕ ಅಂಶ ಪಟ್ಟಿ ಇರಲಿ ಎಂದು ತಿಳಿಸಿದರು.ಇದರಿಂದ ಶಾಲೆಗಳಲ್ಲಿ ಕೊರತೆ ಬಗ್ಗೆ ತಿಳಿಯುತ್ತದೆ. ***ಸರಳ*** ಸಾಹಿತ್ಯವನ್ನು ಪ್ರತಿ ಬಿ.ಆರ್.ಸಿ/ ಸಿ.ಆರ್.ಸಿ.ಗಳಿಗೆ ಪೂರೈಸಲು ಸೂಚಿಸಿದರು.

4. **ಶ್ರೀಮತಿ ಗೀತಾ ಕೆ.ಜಿ. ಹಿ.ಸ.ನಿ. ಎಲ್.ಪಿ..ಎಸ್. ನಂ: 10 ಜೋರಾಪುರ ಪೇಟ್‌ವಿಜಯಪುರ ನಗರ ಶಾಲೆ.**

- ಸೇತುಬಂಧ ಕಾರ್ಯಕ್ರಮವನ್ನು ನಿರ್ವಹಿಸುತ್ತಿದ್ದಾರೆ.
- ದಾಖಲಾತಿ ಆಂದೋಲನ ಮಾಡಿದ್ದನ್ನು ಸಿ.ಆರ್.ಪಿ. ಹೇಳಿದ್ದರೂ ಕೂಡಾ ದಾಖಲಾತಿಯು ನಿರೀಕ್ಷಿತ ಮಟ್ಟದಲ್ಲಿ ಆಗಿರುವದಿಲ್ಲ.
- ಮತ್ತು ನಗರ ವಲಯದ ಶಾಲೆಗಳಲ್ಲಿ ಅಗತ್ಯತೆಗೆ ಅನುಗುಣವಾಗಿ ಪೀಠೋಪಕರಣಗಳನ್ನು ಒಂದು ಶಾಲೆಯಿಂದ ಇನ್ನೊಂದು ಶಾಲೆಗೆ ವಿತರಿಸಿ ಸಮಾನತೆಯನ್ನು ಕಾಯ್ದುಕೊಂಡಿದ್ದನ್ನು ಹೇಳುತ್ತಾ ಬಿ.ಇ.ಓ. ರವರನ್ನು ಅಭಿನಂದಿಸಿದರು.
- ಶಿಕ್ಷಕರು ನಲಿಕಲಿಯು ಕೇವಲ 1ಮತ್ತು2ನೆಯ ತರಗತಿಗಳಿಗೆ ಮಾತ್ರ ಇರುವಂತೆ ತಮ್ಮ ಅಭಿಪ್ರಾಯ ಸೂಚಿಸಿರುವುದನ್ನು ಮಾನ್ಯ ನಿರ್ದೇಶಕರ ಗಮನಕ್ಕೆ ತಂದರು
- ಶಿಕ್ಷಕರೊಂದಿಗೆ ಬೋಧನಾ ಪ್ರಕ್ರಿಯೆ ಕುರಿತು ಚರ್ಚಿಸಲಾಯಿತು. 20%ರಷ್ಟು ಮಾತ್ರ ಕಲಿಕೆಯಾಗಿದೆ. ಓದುವ ರೂಢಿಯ ಅವಶ್ಯಕತೆ ಇದೆ. ಮಕ್ಕಳಿಗೆ ಬರೆಯಲು ಬಂದರೂ ಓದಲು ಬಾರದು. 1 ಮತ್ತು 2 ನೇ ತರಗತಿಯಲ್ಲಿ ಮಾತನಾಡಲು ಮತ್ತು ಓದಿಗೆ ಒತ್ತು ನೀಡಬೇಕು

ಡಯಟ್ ವಿಜಯಪುರ ಪರಿಶೀಲನಾಂಶಗಳು

- ಶೈಕ್ಷಣಿಕ ವೃತ್ತಿ ಮಾರ್ಗದರ್ಶನದಡಿಯಲ್ಲಿ ಡಯಟ್ ಹಂತದಲ್ಲಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ತಿಳಿಸಿದರು.
- ಸ್ಥಳೀಯ ಅಗತ್ಯದ ಕ್ರಿಯಾ ಯೋಜನೆ ಮಾಡಿಸಬೇಕು.
- ಅನುದಾನಿತ ಪ್ರೌಢಶಾಲೆಗಳಿಗೆ ಲಭ್ಯವಿರುವರೂ. 1,000/- ಅನುದಾನ ಬಳಸಬೇಕು. ಸರ್ಕಾರಿ ಪ್ರೌಢ ಶಾಲೆಗಳಿಗೆ ಲಭ್ಯವಿರುವ ರೂ.2,500/- ಅನುದಾನ ಬಳಸಬೇಕು.

ನಿರ್ದೇಶಕರು

- ಸಿ.ಆರ್.ಪಿ.ಗಳ ಕಾರ್ಯಗಳ ಬಗ್ಗೆ ಶೈಕ್ಷಣಿಕ ಪ್ರಕ್ರಿಯೆಯಲಿ ್ಲವಾರದ ನಿಗಧಿತ ದಿನಗಳಲ್ಲಿ ತೊಡಗುವಂತೆ ಮಾಡಲು ಬಿ.ಇ.ಒವರರಿಗೆ ಕ್ರಮಕೈಗೊಳ್ಳಲು ಸೂಚಿಸಿದರು.
- 10 ರಿಂದ 5 ಗಂಟೆವರೆಗೆ ಭಾಗವಹಿಸಲು ಅವಕಾಶದ ಕೊರತೆ.
- ಮಾಹಿತಿ ಸಂಗ್ರಹಣೆಗೆ ಬಹಳ ಸಮಯ ತಗಲುತ್ತಿರುವುದು ನಿಜವಾಗಿದ್ದು, ಬ್ಲಾಕಿನ ಡಾಟಾ ಎಂಟ್ರಿ ಆಪ್‌ರೇಟರ್ ಮತ್ತು ಪ್ರೋಗ್ರಾಮರ್ ಇದ್ದು ಸಿ.ಆರ್.ಪಿ.ಗಳಿಗೆ ಹೊರೆ ಕಡಿಮೆಗೊಳಿಸಲು ತಿಳಿಸಿದರು.
- ನಿಜವಾದ ಸಿ.ಆರ್.ಪಿ. ಗಳಿಗೆ ಶಿಕ್ಷಕರಿಂದ ಮಾನ್ಯತೆ ಸಿಗುತ್ತದೆ

5. **ಶ್ರೀ ಜಂಗಿ , ಕಲಾವಿದರು .ಡಿ.ಎಸ್.ಇ.ಆರ್.ಟಿ , ಸರ್ಕಾರಿ ಪ್ರೌಢ ಶಾಲೆ ಮಣಗೂರ ಶಾಲೆ**

- ಸಂದರ್ಶನ ನೀಡಿದಾಗ 50% ಮಕ್ಕಳ ಹಾಜರಾತಿ ಇರುತ್ತದೆ. ದಿನಚರಿ ಇರುವದಿಲ್ಲ. ವಾರ್ಷಿಕ ಪಾಠ ಯೋಜನೆ ಇರುವುದಿಲ್ಲ. ಸೇತುಬಂಧ ಮಾಡಿಲ್ಲ.
- 2014-15 ನೇ ಸಾಲಿನಲ್ಲಿ ಪ್ರಕಟಿಸಿರುವ ವಾರ್ಷಿಕ ಫಲಿತಾಂಶ ದಾಖಲೀಕರಣ ಪೂರ್ಣಗೊಳಿಸಿಲ್ಲ.
- ಮುಖ್ಯ ಶಿಕ್ಷಕರು ಶಾಲಾ ಕೆಲಸದಲ್ಲಿ ನಿರ್ಲಕ್ಷ ಉಳ್ಳವರಾಗಿದ್ದಾರೆ.
- ಆಟದ ಮೈದಾನ ಇದ್ದು ದೈಹಿಕ ಶಿಕ್ಷಕರು ಇದ್ದರೂ ನಿರ್ವಹಣೆ ಇಲ್ಲ.
- ಚಿತ್ರಕಲಾ ಶಿಕ್ಷಕರು ವಾರ್ಷಿಕ ಯೋಜನೆ ತಯಾರಿಸಿಲ್ಲ , ವರ್ಷಾರಂಭಕ್ಕೆ ಬೇಕಾದ ಯಾವುದೇ ಶೈಕ್ಷಣಿಕ ತಯಾರಿಗಳನ್ನು ಮಾಡಿಕೊಂಡಿಲ್ಲ.
- ಶಾಲಾ ಕಟ್ಟಡ ನಿರ್ಮಾಣ ಮೇಲುಸ್ತುವಾರಿ ಸಮರ್ಪಕವಾಗಿ ಮಾಡುತ್ತಿಲ್ಲ.
- ಈ ಸಂದರ್ಭದಲ್ಲಿ ಅಲ್ಲಿಗೆ ಆಗಮಿಸಿದ್ದ ಮಾನ್ಯ ಶ್ರೀ ಅರುಣ ಶಹಾಪೂರ ಎಂ.ಎಲ್.ಸಿ. ರವರಿಂದ ಇಲಾಖೆಯು ಹಮ್ಮಿಕೊಂಡಿರುವ ಶೈಕ್ಷಣಿಕ ಸ್ಪಂದನಕಾರ್ಯಕ್ರಮವನ್ನು ಪ್ರಶಂಸೆ ಮಾಡಿದರು ಎಂದು ತಿಳಿಸಿದರು.

6. **ಶ್ರೀಮತಿ ಕುಮಾರಿ ಹಿ.ಸ.ನಿ., ಎಲ್.ಪಿ.ಎಸ್.ಅಥರ್ಗಾ ಎಲ್.ಟಿ. ತಾ:ಇಂಡಿ ಶಾಲೆ**

- ಬೆಳಿಗ್ಗೆ ಮಕ್ಕಳು ಶಾಲಾಅವಧಿಗಿಂತ ಬೇಗ ಬಂದು ಕಲಿಕೆಯಲ್ಲಿ ತೊಡಗುತ್ತಾರೆ.
- ಶಾಲೆಯ ಆವರಣದಲ್ಲಿ ಸುಮಾರು 350 ಮರಗಳಿದ್ದು ಆಕರ್ಷಕವಾಗಿದೆ. ಪ್ರಯೋಗಾಲಯ ಇದೆ. ಗುರುತಿನ ಪತ್ರವನ್ನು ಮಕ್ಕಳಿಗೆ ನೀಡಲಾಗಿದೆ. ತರಗತಿಗಳಲ್ಲಿ ಡಿಕ್ಷನರಿ ಇದೆ.
- ರೇಡಿಯೋ ಪಾಠ ನಿರ್ವಹಣೆ ಉತ್ತಮವಾಗಿದೆ.
- ನಲಿ-ಕಲಿಯನ್ನು ಮುಖ್ಯ ಗುರುಗಳು ನಿರ್ವಹಿಸುತ್ತಿದ್ದಾರೆ.
- ಎಸ್.ಡಿ.ಎಂ.ಸಿ. ಇಲ್ಲ ಆದಾಗ್ಯೂ ಗ್ರಾಮಸ್ಥರುಉತ್ತಮವಾಗಿ ಸಹಕಾರ ನೀಡುತ್ತಿದ್ದಾರೆ.
- ಮಕ್ಕಳು ಹಾಜರಾತಿಯನ್ನು ಒಂದು ಇಂಗ್ಲೀಷ್ ಪದವನ್ನು ಹೇಳುವುದರೊಂದಿಗೆ ನೀಡುತ್ತಾರೆ.
- 4 ಮತ್ತು 5 ನೇ ತರಗತಿ ಗಣಿತದ ಮೂಲ ಕ್ರಿಯೆ ಕಲಿಕೆ ಕೊರತೆ ಕಂಡು ಬಂದಿದೆ.
- ಲಂಬಾಣಿ ತಾಂಡಾ ಇರುವುದರಿಂದ ಭಾಷಾ ತೊಂದರೆ ಬಗ್ಗೆ ಶಿಕ್ಷಕರು ತಿಳಿಸಿದರು.
- . ಸಿ.ಸಿ.ಇಯನ್ನು ದಾಖಲೀಕರಣದೊಂದಿಗೆ ಅಳವಡಿಕೆಗೆ ಸೂಚಿಸಿದೆ.

7. **ಶ್ರೀಮತಿ ದ್ರಾಕ್ಷಾಯಣಿ ಹಿ.ಸ.ನಿ., ಎಲ್.ಪಿ.ಎಸ್ ಅಥರ್ಗಾಎಲ್.ಟಿ. ತಾ:ಇಂಡಿ ಶಾಲೆ.**

- ಈ ಶಾಲೆಯಲ್ಲಿ ಬೆಳಿಗ್ಗೆ7.30 ರಿಂದ ಪರಿಹಾರ ಬೋಧನೆ ನಡೆಯುತ್ತದೆ.

- ಮಕ್ಕಳಿಗೆ ಓದಲು ಬರುತ್ತದೆ. ಪರಿಸರ ಮಿತ್ರ ವಿಜೇತ ಶಾಲೆ ಇದಾಗಿದೆ.
- ಸಾವಯವ ಗೊಬ್ಬರ ಘಟಕ ಇದೆ.
- 6ನೇ ತರಗತಿ ಕನ್ನಡ, ಇಂಗ್ಲೀಷ್ ಗಣಿತ ವಿಷಯದ ಕಲಿಕೆಯಲ್ಲಿ ಕೊರತೆ ಇರುತ್ತದೆ.

**ಅನುದಾನಿತ ಪ್ರೌಢ ಶಾಲೆ**

- ಕಂಪ್ಯೂಟರ್ ಲ್ಯಾಬ್ ಬಳಕೆ ಇಲ್ಲ. ಸ್ವಚ್ಛತೆ ನಿರ್ವಹಣೆ ಸಮರ್ಪಕವಾಗಿಲ್ಲ.
- . ಒಬ್ಬ ಶಿಕ್ಷಕರು ಮಾತ್ರ ಇದ್ದಾರೆ. ಭೌತಿಕ ಸೌಲಭ್ಯ ಕೊರತೆ ಇದೆ.
- ವಿಜ್ಞಾನ ಪ್ರಯೋಗಾಲಯ ಇದ್ದರೂ ಬಳಕೆ ಮತ್ತು ನಿರ್ವಹಣೆ ಇಲ್ಲ.
- ಐ.ಸಿ.ಟಿ–3 ಇದ್ದು ಪ್ರೋಜೆಕ್ಟರ್ ಮಾತ್ರ ಪೂರೈಸಿದೆ ಎಂದು ತಿಳಿಸಿರುತ್ತಾರೆ.
- ಗಣಿತದ ವಿಷಯದ ಕಲಿಕೆಯು ತೃಪ್ತಿಕರವಾಗಿಲ್ಲ.

8. **ಶ್ರೀಮತಿ ಉಷಾ ಎಂ.ಡಿ, ಹಿ.ಸ.ನಿ., ಕೆ.ಜಿ.ಎಸ್. ಅಘರ್ಗಾ ಶಾಲೆ**

- 1 ರಿಂದ 7 ನೇ ತರಗತಿ ವರೆಗೆ ಶಾಲೆ ಇದ್ದು, 7 ಶಿಕ್ಷಕರಿದ್ದಾರೆ.
- ಪದವೀಧರಶಿಕ್ಷಕರು ಆ ಶಾಲೆಯಲ್ಲಿ ಇದ್ದು ಅವರಿಗೆ ವಿಜ್ಞಾನ/ ಗಣಿತ ಬೋಧನೆಯ ಜವಾಬ್ದಾರಿ ನೀಡಲಾಗಿದ್ದು ಸದರಿಯವರಿಗೆ ಈ ವಿಷಯಗಳ ಬೋಧನೆಯು ಕಷ್ಟವಾಗಿದೆ ಎಂದು ತಿಳಿಸಿರುತ್ತಾರೆ.
- ಮಾನ್ಯ ನಿರ್ದೇಶಕರು ಬಿ.ಆರ್.ಸಿ. ರವರಿಗೆ ಈ ಕುರಿತು ಎಲ್ಲ ವಿಷಯ ಬೋಧಿಸುವುದು ಪ್ರಾಥಮಿಕ ಶಾಲಾಶಿಕ್ಷಕರ ಕರ್ತವ್ಯವೆಂದು ತಿಳಿಸಿ ನೋಟಿಸ್ ನೀಡಲು ತಿಳಿಸಿದರು.
- ನಲಿ–ಕಲಿ ಉತ್ತಮವಾಗಿದೆ. ಲ್ಯಾಬ್ ಕೊರತೆ ಇದೆ. ಸಮವಸ್ತ್ರ ವಿತರಿಸಿಲ್ಲ (ಪೂರೈಕೆ ಯಾಗಿರುವದಿಲ್ಲ)
- ರೇಶನ್ ಇಲ್ಲದ ಕಾರಣ ಬಿಸಿ ಊಟ ಇರಲಿಲ್ಲ.ಪಕ್ಕದ ಶಾಲೆಯಿಂದ ಪಡೆದು ಮಾಡಬಹುದಾಗಿರುತ್ತದೆ ಎಂದು ಮಾನ್ಯ ನಿರ್ದೇಶಕರು ಹೇಳಿದರು.

9. **ಶ್ರೀ ಗಂಗಮಾರೇಗೌಡ ಹಿ.ಸ.ನಿ.**

- ಶೈಕ್ಷಣಿಕ ಸ್ಪಂದನ ಕಾರ್ಯಕ್ರಮ ಕುರಿತು ವಿವರಿಸಿದರು. ಇಡೀ ಜಿಲ್ಲೆಯ ಚಿತ್ರಣ ತಿಳಿಯಲು ಶಾಲೆಗಳ ಭೇಟಿಗೆ ಅವಕಾಶ ಮಾಡಿಕೊಡಲಾಗಿದೆ.
- ಇದೇ ರೀತಿ ಜಿಲ್ಲಾ ಡಯಟ್ ಮತ್ತು ವಲಯಗಳಲಲ್ಲಿ ಬಿ.ಇ.ಒ ಮತ್ತು ತಂಡಗಳಲ್ಲಿ ಶೈಕ್ಷಣಿಕ ಸ್ಪಂದನ ಕಾರ್ಯಕ್ರಮ ಹಮ್ಮಿಕೊಳ್ಳಲು ಸಲಹೆ ನೀಡಿದರು.

**ಹೆಚ್.ಪಿ.ಎಸ್. ಯಲಗೂರ ಶಾಲೆ**

- ಬೆಳಿಗ್ಗೆ 9.30 ಕ್ಕೆ ಸಂದರ್ಶನ ನೀಡಿದಾಗ ನೈರ್ಮಲ್ಯದ ಕೊರತೆ ಇರುತ್ತದೆ.
- ನಲಿ–ಕಲಿ 3 ಘಟಕ 1 ಮತ್ತು 2 ನೇ ತರಗತಿಯಲ್ಲಿ ಸ್ವಲ್ಪ ಮಟ್ಟಿಗೆ ನಲಿ–ಕಲಿ ಲಕ್ಷಣ ಇದೆ. ಕಲಿಕಾ ಹಂದರ ಹಳೆಯದೇ ಇದೆ. ಎತ್ತರ ಕಡಿಮೆಗೊಳಿಸಬೇಕು. ವಾಲ್‌ಸ್ಲೇಟ್ ಇಲ್ಲ.
- 3ನೇ ತರಗತಿ ಪ್ರತ್ಯೇಕಗೊಳಿಸಿದ್ದು ನಲಿಕಲಿ ಅನುಸರಣೆ ಇಲ್ಲ. ನಲಿ–ಕಲಿ ತರಬೇತಿ ಇಬ್ಬರಿಗೆ ಆಗಿದೆ.
- 8 ನೇ ತರಗತಿ ಇಲ್ಲದಿದ್ದರು ಟಿ.ಜಿ.ಟಿ ಶಿಕ್ಷಕರು ಇದ್ದಾರೆ.
- ಎಸ್.ಡಿ.ಎಂ.ಸಿ ಇದ್ದೂ 2014–15 ರಲ್ಲಿ 2 ಸಲ ಸಭೆ ಮಾತ್ರ ಆಗಿವೆ. ಕನಿಷ್ಠ ತಿಂಗಳಿಗೆ ಒಂದು ಸಭೆ ಆಗಬೇಕು.
- ಅನುಪಯುಕ್ತ ವಸ್ತುಗಳ ವಿಲೇವಾರಿ ಆಗುತ್ತಿಲ್ಲ. ಇದಕ್ಕಾಗಿ 1 ದೊಡ್ಡ ಕೋಣೆ ಮೀಸಲಾಗಿದೆ. ಈ ಕೊಠಡಿಯನ್ನು ಕಲಿಕಾ ಪ್ರಕ್ರಿಯೆಗೆ ಬಳಸಲು ಕ್ರಮಕೈಕೊಳ್ಳಲು ತಿಳಿಸಿದೆ.
- ಭೇಟಿ ನೀಡಿದ ಶಾಲೆಗಳ ಶಿಕ್ಷಕರಿಗೆ 2014–15 ನೇ ಸಾಲಿನಲ್ಲಿ ಆಗಿರುವ ತರಬೇತಿಗಳ ಬಗ್ಗೆ ಸ್ಪಷ್ಟತೆ ಇರಲಿಲ್ಲ.

**ಹೆಚ್.ಪಿ.ಎಸ್. ಬೇನಾಳ ಶಾಲೆ**

- 6 ಶಿಕ್ಷಕರಲ್ಲಿ 2 ಶಿಕ್ಷಕರು ಮಾತ್ರ ಹಾಜರಾಗಿದ್ದಾರೆ.

1. ಶ್ರೀಮತಿ ಆಶ್ರೀತ್ ಸ.ಶಿ ಇವರು ಬಿ.ಎಸ್.ಸಿ. ಕಲಿಯಲು ತೆರಳಿದ್ದು, ಅವಧಿ ಮುಗಿದ ನಂತರ ಶಾಲೆಗೆ ಹಾಜರಾಗಿರುವುದಿಲ್ಲ. ಈ ಕುರಿತು ಬಿ.ಇ.ಓ ಪರಿಶೀಲಿಸಿ ವರದಿ ಮಾಡಲು ನಿರ್ದೇಶಕರು ಸೂಚಿಸಿದರು.

**ಕೆ.ಜಿ.ಬಿ.ವ್ಹಿ. ಅರಕೇರಿ ವಸತಿ ಶಾಲೆ ಶಾಲಾ ಸಂದರ್ಶನ**

- ಈ ಶಾಲೆಯ ನಿರ್ವಹಣೆ ಅತೀ ಕಳಪೆ ಮಟ್ಟದಾಗಿದೆ.
- ಒಂದೇ ಟ್ಯಾಂಕ್ ನೀರು ಎಲ್ಲದಕ್ಕೂ ಬಳಸಲಾಗುತ್ತಿದೆ.
- ಶೌಚಾಲಯಗಳು ಇದ್ದರೂ ಬಳಕೆಮಾಡುತ್ತಿಲ್ಲ.
- ಬಿಸಿನೀರಿನ ಬಳಕೆ/ಪೂರೈಕೆ ಇಲ್ಲ.
- ಕುಡಿಯುವ ನೀರಿನ ಅಕ್ವಾಗಾರ್ಡ್ ಇದ್ದು ಕನೆಕ್ಷನ್ ಕೊಟ್ಟಿಲ್ಲ.

**ನಿರ್ದೇಶಕರವರು**

ಬಿ.ಇ.ಓ/ ಡಿ.ವಾಯ್.ಪಿ.ಸಿ ರವರಿಗೆ ಸೆಪ್ಟಂಬರ್ ನಿಂದ ಮಹಿಳಾ ಸಾಮುಖ್ಯದಿಂದ ಈ ಶಾಲೆ ಪ್ರತ್ಯೇಕಿಸಿದ ನಂತರ ಕೈಗೊಂಡ ಕ್ರಮಗಳೇನು? ಎಂದು ಪ್ರಶ್ನಿಸಿದರು. ಹಾಗು ಉಪನಿರ್ದೇಶಕರು(ಆಢಳಿತ) ಬಿ.ಇ.ಓವಿಜಯಪುರ ಗ್ರಾಮೀಣವಲಯ ಮತ್ತು ಡಿ.ವಾಯ್.ಪಿ.ಸಿ ಇವರುಗಳ ಕರ್ತವ್ಯ ಲೋಪದ ಆಪಾದನೆಗಳ ಪಟ್ಟಿ ಮಾಡಿ ಸರ್ಕಾರಕ್ಕೆ ಸಲ್ಲಿಸಲು ಆದೇಶಿಸಿದರು– ಕ್ರಮ ಉಪನಿರ್ದೇಶಕರು (ಆಢಳಿತ).

**ವಿಜಯಪುರ ಜಿಲ್ಲೆಯ ಎಲ್ಲಾ ಬಿ.ಇ.ಓ ರವರು ತಮ್ಮ ವಲಯದು ಶೈಕ್ಷಣಿಕ ಪ್ರಗತಿಯನ್ನು ಹೆಚ್ಚಸಲು ಕೆಳಕಾಣಿಸಿದ ಕಾರ್ಯಕ್ರಮಗಳನ್ನು ಮಾಡುವುದಾಗ ಘೋಷಿಸಿದರು:–**

1. ***10 ಅಂಶಗಳ ಕಾರ್ಯಕ್ರಮವನ್ನು ತಮ್ಮ ವಲಯದ ಎಲ್ಲಾ ಶಾಲೆಗಳಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ತರಲಾಗುವುದು.***
2. ***ಈ ಶೈಕ್ಷಣಿಕ ವರ್ಷದಲ್ಲಿ ಖಾಸಗಿ ಶಾಲೆಗಳಿಂದ 2500 ರಷ್ಟು ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಾತಿ ಮಾಡಿಕೊಳ್ಳಲಾಗುವುದು.***
3. ***ವಲಯದ ಎಲ್ಲ ಶಾಲೆಗಳಲ್ಲಿ ನಲಿ-ಕಲಿಯನ್ನು ಮನಶ್ಚೇತನಗೊಳಿಸಲಾಗುವುದು.***
4. ***ವಲಯದ ಎಲ್ಲ ಶಾಲೆಗಳಲ್ಲಿರುವ ಅನುಪಯುಕ್ತ ವಸ್ತುಗಳನ್ನು ವಿಲೇವಾರಿ ಆಂದೋಲನ ಮಾದರಿಯಲ್ಲಿ ವಿಲೇವಾರಿ ಮಾಡಲಾಗುವುದು.***
5. ***ಸರ್ಕಾರಿ ಶಾಲೆಗಳಲ್ಲಿ ಪಿಠೋಪಕರಣಗಳು ಅಗತ್ಯಕ್ಕಿಂತ ಹೆಚ್ಚಿಗೆ ಲಭ್ಯವಿರುವ ಶಾಲೆಯಿಂದ ಅಗತ್ಯವಿರುವ ಸರ್ಕಾರಿ ಶಾಲೆಗಳಿಗೆ ವಿತರಿಸಲಾಗುವುದು.***

- ನಗರ ವಲಯದ ಬಿ.ಇ.ಓ. ರವರು ಪ್ರಸಕ್ತಸಾಲಿಗಾಗಿ ಕೈಗೊಂಡಿರುವ ಚಟುವಟಿಕೆಗಳನ್ನು ವಿವರಿಸಿದರು. ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಶಿಕ್ಷಕರಿಗೆ ತರಬೇತಿ ನೀಡುವುದು, ಕಂಪ್ಯೂಟರ್ ಬಳಕೆ ಉತ್ತಮೀಕರಿಸಲು ಶಿಕ್ಷಕರಿಗೆ ತರಬೇತಿಗೆ ಕಂಪ್ಯೂಟರ್ ಲ್ಯಾಬ್ ನಿರ್ಮಾಣ, ಇಂಟರ್‌ನೆಟ್, ಲ್ಯಾನ್, ಎಲ್.ಸಿ.ಡಿ. ಪ್ರೋಜೆಕ್ಟ್ ಗಳಿಗೆ ಅನುದಾನ ಬಳಕೆಗೆ ಅನುಮತಿ ಕೇಳಿದರು. ಮಾನ್ಯ ನಿರ್ಧೇಶಕರು ಅನುಮತಿ ಕೇಳಿ ಪತ್ರ ಬರೆಯಲು ತಿಳಿಸಿದರು. ಪ್ರೊಜೆಕ್ಟ್‌ಗಾಗಿ ಶ್ರೀ ಮಂಜುನಾಥ ಡಿ.ಎಸ್.ಇ.ಆರ್.ಟಿ.ಗೆ ಸಂಪರ್ಕಿಸಲು ತಿಳಿಸಿದ್ದಾರೆ.

**ನಿರ್ದೇಶಕರು ನೀಡಿದ ನಿರ್ದೇಶನಗಳು:–**

- ಪ್ರೌಢ ಶಾಲೆಗಳಿಗೆ ಪ್ರಾಥಮಿಕ ಶಾಲೆಗಳನ್ನು ದತ್ತು ನೀಡುವುದು.
- ಪಿ.ಎಸ್.ಟಿ.ಇ. ವಿಭಾಗಕ್ಕೆ ವಿಷಯವಾರು ಉಪನ್ಯಾಸಕರ ಮಂಜೂರಿಗೆ ಪತ್ರ ಬರೆಯಲು ಡಯಟ್ ಪ್ರಾಚಾರ್ಯರಿಗೆ ಸೂಚಿಸಲಾಯಿತು.
- ಡಿ.ಇಡಿ/ ಡಿ.ಪಿ.ಇಡಿ ಸಂಸ್ಥೆಗಳಲ್ಲಿ ನಿಯಮಾನುಸಾರ ಬೋಧಕರು ಇಲ್ಲದ ಮತ್ತು ಸೌಲಭ್ಯ ರಹಿತ ಸಂಸ್ಥೆಗಳನ್ನು ಕುರಿತು ಎಚ್ಚರಿಕೆ ನೀಡಿ ಎನ್.ಸಿ.ಟಿ.ಇ.ಗೆ ಮಾನ್ಯತೆ ರದ್ದುಪಡಿಸಲು ಪತ್ರ ಬರೆಯಲು ಡಯಟ್ ಪ್ರಾಚಾರ್ಯರಿಗೆ ಸೂಚಿಸಿದರು.
- ಜಿಲ್ಲೆಯಲ್ಲಿ ಸಮಾಲೋಚನಾ ಸಭೆಗಳನ್ನು ಫಲಪ್ರದವಾಗುವಂತೆ ನಡೆಸಲು ಉಪನಿರ್ದೇಶಕರು ಆಢಳಿತ ಮತ್ತು ಅಭಿವೃದ್ಧಿ ಇಬ್ಬರೂ ಕ್ರಮಕೈಗೊಳ್ಳಲು ಸೂಚಿಸಿದರು.
- ಜಿಲ್ಲೆಯಲ್ಲಿರುವ ವಿಜ್ಞಾನ ಕೇಂದ್ರಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿ ಅವುಗಳ ಪ್ರಯೋಜನ ಇತರೆ ಶಾಲೆಗಳಿಗೆ ಆಗುವಂತೆ ಕ್ರಮಕೈಗೊಳ್ಳಲು ಡಯಟ್ ಗೆ ಸೂಚಿಸಿದರು..

- ಎಸ್.ಎಸ್.ಎಲ್.ಸಿ. ಪೂರಕ ಪರೀಕ್ಷಾ ಕೇಂದ್ರದಲ್ಲಿನ ಸ್ವಚ್ಛತೆಯ ಕೊರತೆ ಚಹಾ ಕಾಫಿಗಾಗಿ ಪ್ಲಾಸ್ಟಿಕ್ ಕಪ್ ಬಳಕೆ ಕಂಡು ಬಂದಿದ್ದು ಸ್ವಚ್ಛತೆ ಕಾಯ್ದುಕೊಳ್ಳಲು ಮತ್ತು ತರಬೇತಿ, ಕಚೇರಿಗಳಲ್ಲಿ ಸ್ಟೀಲ್ ಅಥವಾ ಪೇಪರ್‌ನ ಉತ್ತಮ ಕಪ್‌ಗಳನ್ನು ಚಹಾ/ ಕಾಫಿಗಳಿಗೆ ಬಳಸಲು ತಿಳಿಸಿದರು.
- ಡಯಟ ಮತ್ತು ಅಜೀಂ ಪ್ರೇಮಜಿ ವತಿಯಿಂದ ನಡೆಸಲಾಗುತ್ತಿರುವ ಉರ್ದು ನಲಿ-ಕಲಿ ತರಬೇತಿ ಉತ್ತಮವಾಗಿ ನಡೆಯುತ್ತಿದೆ.
- ಉರ್ದು ನಲಿ-ಕಲಿ ಕಿಟ್‌ಗಳು, ಕ್ಯಾಲ್ಕ್ ಉರ್ದು ಡಿ.ವ್ಹಿ.ಡಿ. ಪೂರೈಸುವುದು, ಎಲ್ಲ ಮಾಧ್ಯಮಗಳಲ್ಲಿಯೂ ಒಟ್ಟಿಗೆ ಸಾಹಿತ್ಯ/ ಸಾಮಗ್ರಿಗಳನ್ನು ಸಿದ್ಧಪಡಿಸುವ ಬಗ್ಗೆ ತಿಳಿಸಿದರು. ಕ್ರಮ ಡಿ.ಎಸ್.ಇ.ಆರ್.ಟಿ ನಲಿ ಕಲಿ ವಿಭಾಗ
- ಉರ್ದು ಮಾಧ್ಯಮದ ಬಿ.ಆರ್.ಪಿ ನೇಮಕಾತಿ ಕುರಿತು ವಲಯದಲ್ಲಿ 30 ಉರ್ದು ಶಾಲೆಗಳಿರುವ ಬ್ಲಾಕ್‌ಗಳಿಗೆ ಒಂದು ಬಿ.ಆರ್.ಪಿ ಹುದ್ದೆಯನ್ನು ಉರ್ದು ವಾಗಿ ಪರಿಗಣಿಸುವ ಕುರಿತು ಯೋಚಿಸಲಾಗುವದೆಂದು ಹೇಳಿದರು.
- ಉರ್ದು ಶಾಲೆಗಳಲ್ಲಿ ಸಾಮಾನ್ಯ ದೈಹಿಕ ಶಿಕ್ಷಕರಿದ್ದು, ಉರ್ದು ಮಾಧ್ಯಮದ ದೈಹಿಕ ಶಿಕ್ಷಕರನ್ನು ನೇಮಿಸುವ ಅಗತ್ಯವಿದೆ ಎಂದು ತಿಳಿಸಿದರು.
- ಮಾನ್ಯ ನಿರ್ದೇಶಕರು ಈ ಕೆಳಗಿನ ಚಟುವಟಿಕೆಗಳ ಕುರಿತು ಡಯಟನಿಂದ ಆಗಿರುವ ಕೆಲಸಗಳನ್ನು ಪಟ್ಟಿಮಾಡಿ ವರದಿ ಸಲ್ಲಿಸಲು ತಿಳಿಸಿದ್ದಾರೆ.
  1. ಡಯಟನ ಪ್ರಗತಿಗಾಗಿ ಸಿಬ್ಬಂದಿ ಮಾಡಿರುವ ಕಾರ್ಯಗಳ ಪಟ್ಟಿ.
  2. ಸಿಬ್ಬಂದಿಯ ಪ್ರಗತಿಗಾಗಿ ಮಾಡಿರುವ ಪ್ರಯತ್ನಗಳು.
  3. ಡಿ.ಇಡಿ/ ಡಿ.ಪಿ.ಇಡಿ ಉಪನ್ಯಾಸಕರಿಗಾಗಿ ಡಯಟನಿಂದಾದ ಚಟುವಟಿಕೆಗಳು.
  4. ಪ್ರಾಥಮಿಕ/ ಪ್ರೌಢ ಶಾಲಾ ಶಿಕ್ಷಕರಿಗಾಗಿ ಡಯಟನಿಂದಾದ ಚಟುವಟಿಕೆಗಳು.
  5. ಪ್ರಾಥಮಿಕ/ ಪ್ರೌಢ ಶಾಲಾ ಮಕ್ಕಳು, ಡಿ.ಇಡಿ/ ಡಿ.ಪಿ.ಇಡಿ ಪ್ರಶಿಕ್ಷಣಾರ್ಥಿಗಳಿಗಾಗಿ ಡಯಟನಿಂದಾದ ಚಟುವಟಿಕೆಗಳು.
  6. ಪಾಲಕರಿಗಾಗಿ ಡಯಟನಿಂದಾದ ಚಟುವಟಿಕೆಗಳು.
  7. ಮೇಲ್ವಿಚಾರಣಾಧಿಕಾರಿಗಳಿಗಾಗಿ ಡಯಟನಿಂದಾದ ಚಟುವಟಿಕೆಗಳು.
  8. ಪ.ಜಾತಿ, ಪ.ಪಂ., ಅಲ್ಪಸಂಖ್ಯಾತ, ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಮತ್ತು ಹೆಣ್ಣು ಮಕ್ಕಳಿಗಾಗಿ ಡಯಟನಿಂದಾದ ಚಟುವಟಿಕೆಗಳು.
- ಉಪನಿರ್ದೇಶಕರು (ಆಡಳಿತ) ರವರು 2014-15 ನೇ ಸಾಲಿನ ಜಿಲ್ಲೆಯ ಎಸ್.ಎಸ್.ಎಲ್.ಸಿ. ಫಲಿತಾಂಶವು ತುಂಬಾ ಕಡಿಮೆಯಾಗಿದೆ. 2015-16 ನೇ ಸಾಲಿಗಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಸುಧಾರಣೆಗಾಗಿ ಈ ಕೆಳಗಿನ ಅಂಶಗಳನ್ನು ವಿವರಿಸಿದರು.
  1. 10 ನೆ ತರಗತಿ ಮಕ್ಕಳಿಗೆ ವಿಶೇಷ ತರಬೇತಿ ನೀಡುವುದು.
  2. ಡಯಟನಿಂದ ಪೂರೈಸಲಾಗಿರುವ ಸೇತುಬಂಧ ಪ್ರಶ್ನೆ ಪತ್ರಿಕೆಗಳನ್ನು ಬಳಸಿಕೊಂಡು ಪರೀಕ್ಷೆ ನಡೆಸಲಾಗುತ್ತಿದೆ.
  3. ವಿದ್ಯಾರ್ಥಿಗಳಿಗೆ ಪ್ರಥಮ. ದ್ವಿತೀಯ ಹಾಗೂ ತೃತೀಯ ಭಾಷೆಗಳಲ್ಲಿ ಓದಲು ಹಾಗೂ ಬರೆಯಲು ರೂಢಿ ಮಾಡಿಸುವುದು.
  4. ಎಲ್ಲ ತರಗತಿಗಳಲ್ಲಿ ಇಂಗ್ಲೀಷ್ ಭಾಷಾ ಕಲಿಕೆಗೆ ಒತ್ತು ನೀಡುವುದು.
  5. ನಲಿ-ಕಲಿಯನ್ನು ಮನಸ್ಪೂರ್ತಿನಗೊಳಿಸುವುದು. ಶಾಲೆಗಳಲ್ಲಿರುವ ಹಳೆಯ ಸಾಮಾನುಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲಾಗುವದೆಂದು ತಿಳಿಸಿದರು.
- ನಿರ್ದೇಶಕರು ಸಿ.ಸಿ.ಆರ್.ಟಿ. ತರಬೇತಿಗೆ ಹೋಗ ಬಯಸುವ ಶಿಕ್ಷಕರನ್ನು ನಿಯೋಜಿಸಲು ಮಾನ್ಯ ಉಪನಿರ್ದೇಶಕರು (ಆಡಳಿತ) ರವರಿಗೆ ಸೂಚಿಸಿದರು.
- ಪ್ರಾಚಾರ್ಯರರು ಡಯಟ ವಿಜಯಪುರ ರವರು 2014-15 ನೇ ಸಾಲಿನಲ್ಲಿ ಆಗಿರುವ ಪ್ರಗತಿಯ ಕುರಿತು ಪಿ.ಪಿ.ಟಿ ಮುಖಾಂತರ ಮಂಡಿಸಿದರು. ಮತ್ತು 2015-16 ರ ಯೋಜನೆಗಳನ್ನು ಈ ಕೆಳಗಿನಂತೆ ವಿವರಿಸಿದರು.
  1. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ (10 ನೇ ತರಗತಿಯನ್ನು ಸೇರಿಸಿ) ಸೇತುಬಂಧ ಕಾರ್ಯಕ್ರಮಕ್ಕಾಗಿ ಸಾಮರ್ಥ್ಯಗಳ ಪಟ್ಟಿ ಮತ್ತು ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಿ ಜಿಲ್ಲೆಯಾದ್ಯಂತ ವಲಯಗಳ ಮುಖಾಂತರ ವಿತರಿಸಲಾಗಿದೆ.
  2. ನಲಿ-ಕಲಿ ತರಬೇತಿ, 4 ಮತ್ತು 5 ನೇ ತರಗತಿ ಶಿಕ್ಷಕರಿಗಾಗಿ ತರಬೇತಿ, 6 ರಿಂದ 8 ಗಣಿತ ಮತ್ತು ವಿಜ್ಞಾನ ಶಿಕ್ಷಕರಿಗಾಗಿ ತರಬೇತಿ ಸಾಹಿತ್ಯವನ್ನು ಸಿದ್ಧಪಡಿಸಲಾಗಿದೆ.
  3. ರಜಾ ಅವಧಿಯಲ್ಲಿ ನಗರ ವಲಯದ ಸಿ.ಆರ್.ಪಿ/ ಶಿಕ್ಷಕರಿಗೆ ಕಂಪ್ಯೂಟರ್ ತರಬೇತಿ ನೀಡಲಾಗಿದೆ.

4. ರಜಾ ಅವಧಿಯಲ್ಲಿ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ಕಂಪ್ಯೂಟರ್ ತರಬೇತಿ ನೀಡಲಾಗಿದೆ.
5. 2014–15 ನೇ ಸಾಲಿಗಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಗಾಗಿ ಸರಣಿ ಪರೀಕ್ಷಾ ಪ್ರಶ್ನೆ ಪತ್ರಿಕೆಗಳನ್ನು ಪೂರೈಸಲಾಗಿದ್ದು ಈ ವರ್ಷವು ಮುಂದುವರಿಸಲಾಗುವುದು.
6. 10 ನೇ ತರಗತಿಯ ಎಲ್ಲ ವಿಷಯಗಳ ಅಧ್ಯಾಯವಾರು, ತಿಂಗಳುವಾರು ಪ್ರಶ್ನೆಗಳ ಪಟ್ಟಿ ತಯಾರಿಸುವುದು.

- ಶೈಕ್ಷಣಿಕ ಅದಾಲತ್ ಕಾರ್ಯಕ್ರಮದ ಕುರಿತು ತಿಳಿಸಿ ಎಲ್ಲ ವಲಯಗಳಲ್ಲಿ ಶಿಕ್ಷಕರ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸೂಚಿಸಿದಾಗ ಪ್ರಾಚಾರ್ಯರರು ಈಗಾಗಲೇ ಜಿಲ್ಲೆಯಲ್ಲಿ ಈ ಚಟುವಟಿಕೆಯನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.
- ಸಿ.ಆರ್.ಪಿ.ಗಳಿಗೆ ತಿಂಗಳಿಗೆ ವಾರದಲ್ಲಿ ಕಡ್ಡಾಯವಾಗಿ 2 ದಿನ ಶಾಲಾ ಭೇಟಿಗಳಿಗೆ ಮೀಸಲಿಡುವಂತೆ ತಿಳಿಸಿದರು.
- ಶಾಲೆಗೆ ಪಾಲಕರನ್ನು, ಹಳೆ ವಿದ್ಯಾರ್ಥಿಗಳನ್ನು ಆಹ್ವಾನಿಸಿ ಶೈಕ್ಷಣಿಕ ಚಟುಟಿಕೆಗಳಲ್ಲಿ ತೊಡಗಿಸಿಕೊಳ್ಳವುದು, ಜ್ಞಾನಧಾರ ಕಾರ್ಯಕ್ರಮದಡಿಯಲ್ಲಿ ವಲಯ ಮತ್ತು ಜಿಲ್ಲಾ ಮಟ್ಟದಲ್ಲಿ ಉಪನ್ಯಾಸಗಳನ್ನು ಆಯೋಜಿಸಲು ಸೂಚಿಸಿದರು.

(ಎಸ್. ಜಯಕುಮಾರ್)
ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು.–85

ರಿಗೆ,

1) ಪ್ರಾಂಶುಪಾಲರು, ಡಯಟ್ ವಿಜಯಪುರ ಜಿಲ್ಲೆ, ಇವರ ಮುಂದಿನ ಅಗತ್ಯ ಕ್ರಮಕ್ಕೆ ಮತ್ತು ಅನುಪಾಲನಾ ವರದಿ ನೀಡುವ ಕ್ರಮಕ್ಕಾಗಿ.
2) ಉಪನಿರ್ದೇಶಕರು ಸಾ.ಶಿ.ಇ, ವಿಜಯಪುರ ಜಿಲ್ಲೆ, ರವರಿಗೆ ಮುಂದಿನ ಕ್ರಮಕ್ಕಾಗಿ.
3) ವಿಜಯಪುರ ಜಿಲ್ಲೆ, ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.
4) ವಿಜಯಪುರ ಜಿಲ್ಲೆ, ಎಲ್ಲಾ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.

ಮಾಹಿತಿಗಾಗಿ

1) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಅವಗಾಹನೆಗೆ ವಂದನಾಪೂರ್ವಕವಾಗಿ ಸಲ್ಲಿಸಿದೆ.
2) ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ಸರ್ವಶಿಕ್ಷಣ ಅಭಿಯಾನ , ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.